

**ಎಡದಿಂದ ಬಲಕ್ಕೆ**

1. ಅವನು ಕಂಪಿಸುತ್ತಿರುವುದನ್ನು ಕಂಡರೇ ಸಹಾನುಭೂತಿ (4)
3. ಗೆದ್ದರೂ ಮೋಸ ಮಾಡಿದವರನ್ನು ಮಾತಿನಿಂದ ಹೆದರಿಸು (3)
4. ಹಾಜರಾಗುವ ಎಲ್ಲರನ್ನೂ ಕೂಡಿಸಬಹುದಾದ ಸಭಾಂಗಣ (3)
6. ವನನಾಶ ಅತಿಯಾಗಿ ಈ ದುರ್ದೆಶೆ (4)
8. ನಮಗೆ ಸಹಕಾರ ಕೊಟ್ಟವರಿಗೆ ವಂದನೆ (4)
10. ಬಲ್ಲವರು ಜೊತೆಗೂಡಿದ್ದೇ ಹೊಸ ಶಕ್ತಿ (4)
12. 'ಯಾವಾಗಲೂ ಸಂತೋಷ' ಏನು ಈ ಹೆಸರು? (4)
16. ಅನುಗಾಲವೂ ಸೋಲೇ ಇಲ್ಲ– ಹೇಗೆ? (3)
17. ಬಡಾಯಿ ಕೊಚ್ಚುವವ, ದುಡ್ಡು ಕಾಸು ಇಲ್ಲದವ (3)
18. ಗಣಿ ಕೆಲಸಗಾರರಿಗೆ ಗೆಳೆಯ (4)

**ಮೇಲಿಂದ ಕೆಳಕ್ಕೆ**

1. ಆಹಾರ ಬೆಳೆದ ವಿವರ ತಿಳಿಸು (3)
2. ಪರಿಹಾರದ ವಸ್ತುಸಂಗ್ರಹಕ್ಕೆ ಕಾವಲು (3)
3. ಹೊಗೆಯನ್ನ ಹೊರಡಿಸಿಹ ಕ್ರಮ– ಅರ್ಥವಾಗುವಂತಿಲ್ಲ (3)
6. ರಾಮನ ಜೊತೆಗೆ ಪ್ರಸಿದ್ಧ ಇಸ್ಲಾಂ ಧರ್ಮೀಯ (3)
6. ಅವನ ಮಾವನ ಬಗೆಗೆ ಯಾವುದೋ ಸಂಶಯ (4)
7. ಗೊತ್ತಿಲ್ಲವೇ? ಥಾಲಿಯ ತುಂಬ ಎಳ್ಳಿನ ಎಣ್ಣೆ (4)
8. ವನಸುಮ ಸಂರಕ್ಷಣೆಗೆ ಒಂಬತ್ತು ತಿಂಗಳು (4)
9. ರಾಜ್ಯಕ್ಕೆಲ್ಲ ಇದೇ 'ಬಿಡುವಿನ ಸಮಯ' (4)
11. ಬಾಡಿಗೆ ಕೇಳಿದವರಿಗೆ ದೊಣ್ಣೆ ತೋರಿದನೇ? (3)
13. ವದನ ನೋಡಿದರೇ ಸಾಕು, ರಾಕ್ಷಸ (3)
14. ಹಾವಿನ ಬೇಟೆಗೆ ಚಪ್ಪಲಿ (3)
15. ಅಬ್ಬರಕ್ಕೆ ಕಾರಣ ವಸ್ತ್ರ, ಉಡುಗೆ (3)

## ಪದಬಂಧ : 3-12-2009ರ ಉತ್ತರಗಳು

**ಎಡದಿಂದ ಬಲಕ್ಕೆ**

1. ಸಂಯಮ; 3. ಆನಂದ; 4. ಕುಡುಕ; 6. ಪರಾಶರ; 7. ಮಣಭಾರ; 9. ವಿನಿಮಯ; 11. ಸಬಕಾರ; 15. ರವಾನೆ; 16. ವರ್ಣನೆ; 17. ಸುಮ್ಮಾನ.

**ಮೇಲಿಂದ ಕೆಳಕ್ಕೆ**

1. ಸಂದರ್ಭ; 2. ಮಕುಟ; 3. ಆವೇಶ; 5. ಕಠಿಣ; 6. ಪದವಿ; 8. ರಕಾರ; 10. ಮಧುರ; 12. ಬದನೆ; 13. ನೆನೆಸು; 14. ಪವನ.

# ಗಾತ್ರ- ಸೋಜಿಗ

## 'ಕುಂಬಳ ಗಾತ್ರ'- ಏನು ದಾಖಲೆ?

ಕುಂಬಳದ ಎರಡು ವಿಧಗಳು– 'ಬೂದುಗುಂಬಳ ಮತ್ತು ಸಿಹಿಗುಂಬಳ'– ತುಂಬ ಪ್ರಸಿದ್ಧ. ಬಹು ಕಾಲ ಬಾಡದ, ಬಹು ವಿಧ ಬಳಕೆಯ ತರಕಾರಿಗಳಾಗಿ ಅವು ವಿಖ್ಯಾತ; ಜಗದಾದ್ಯಂತ ಜನಪ್ರಿಯ.

ಆದರೆ ಕುಂಬಳಗಳ ಪರಮಖ್ಯಾತಿ ಇರುವುದೇ ಅವುಗಳ ಗಾತ್ರ–ತೂಕಗಳಲ್ಲಿ. ಎಂಟು–ಹತ್ತು ಕಿಲೋ ತೂಕ ಅವುಗಳಲ್ಲಿ ತುಂಬಾ ಸಾಮಾನ್ಯ. ನಲವತ್ತು– ಐವತ್ತು ಕಿಲೋ ತೂಗುವ ಕುಂಬಳಗಳು ಅಪರೂಪವಲ್ಲ. ನೂರು– ಇನ್ನೂರು ಕಿಲೋ ತೂಗುವ 'ಭೂತಕುಂಬಳ'ಗಳನ್ನು ಕಂಡಿರುವವರೂ ಬೇಕಾದಷ್ಟು ಜನ ಇದ್ದಾರೆ.

ವಾಸ್ತವ ಏನೆಂದರೆ ಬೃಹದಾಕಾರದ ಸಿಹಿಗುಂಬಳಗಳನ್ನು ಬೆಳೆಯುವುದು ರೈತರಲ್ಲಿ– ಅದೂ ಅಮೆರಿಕದ ತೋಟಗಾರರಲ್ಲಿ– ಒಂದು ಹವ್ಯಾಸ; ವರ್ಷದಿಂದ ವರ್ಷಕ್ಕೆ ಹೊಸ ಹೊಸ ದಾಖಲೆಗಳನ್ನು ಸೃಜಿಸುವ ಉತ್ಸಾಹ– ಪರಿಣಾಮವಾಗಿ ದಿನೇ ದಿನೇ ಕುಂಬಳಗಳದು ಅಧಿಕಾಧಿಕ ಭೂತಾಕಾರ; ಫಲ–ಪುಷ್ಪ ಪ್ರದರ್ಶನಗಳಲ್ಲಿ ನೋಡುಗರನ್ನೆಲ್ಲ ಬೆಚ್ಚಿಸುವ ಬೆರಗಾಗಿಸುವ ಮಹಾಗಾತ್ರಗಳ ಅವತಾರ; ಲಕ್ಷಾಂತರ ರೂ.ಗಳಷ್ಟು ಬಹುಮಾನದ ಪುರಸ್ಕಾರ.




'ಭೂತ ಕುಂಬಳ'ಗಳ ಅದ್ಭುತ ಗಾತ್ರಗಳ ಈ ದೈತ್ಯ ದಾಖಲೆಗಳನ್ನು ನೀವೇ ಗಮನಿಸಿ:

★ ವರ್ಷ 2007: ಅಮೆರಿಕದಲ್ಲಿ ಪ್ರದರ್ಶನಗೊಂಡ ಒಂದು ಸಿಹಿಗುಬಳ. ಅದರ ತೂಕ 767.73 ಕಿಲೋಗ್ರಾಂ!

★ ವರ್ಷ 2008 ನ್ಯೂ ಇಂಗ್ಲೆಂಡ್‌ನ ತೋಟಗಾರ 'ಸ್ಟೀವ್ ಕಾನೊಲಿ' ಬೆಳೆದದ್ದು ಮತ್ತೊಂದು ಭೂತಕುಂಬಳ. ತೂಕ– 712.73 ಕಿಲೊ! ಆದರೂ ಹಿಂದಿನ ವರ್ಷಕ್ಕಿಂತ 55 ಕಿಲೋ ಕಡಿಮೆ.

★ 2009: ಅಮೆರಿಕದಲ್ಲಿ ಈವರೆಗಿನ ಅತಿ ದೊಡ್ಡ ಸಿಹಿಗುಂಬಳ ಪ್ರತ್ಯಕ್ಷ. 'ಕ್ರಿಸ್ಟೀ' ಎಂಬಾತ ಬೆಳೆದು ಪ್ರದರ್ಶಿಸಿದ ಆ ಕುಂಬಳದ ತೂಕ 784 ಕಿಲೋಗ್ರಾಂ!

ಅದೆಲ್ಲ ಇರಲಿ ದಾಖಲೆ ನಿರ್ಮಿಸುವ ಆಸಕ್ತಿಯ ತೋಟಗಾರರ ಗುರಿ ಸಾವಿರ ಕಿಲೋ ತೂಕದ ಭೂತಕುಂಬಳದ ಸೃಷ್ಟಿ! ಅದಕ್ಕೆ ಬಹಳ ವರ್ಷಗಳೇನೂ ಬೇಕಿಲ್ಲ ಎಂಬ ವಿಶ್ವಾಸ ಕೂಡ.

■ ಎನ್. ವಾಸುದೇವ್